ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಖಾನಾಪೂರ.

ಸಿ.ಸಿ ನಂ: **218/2020**

ಪಿ.ಡಬ್ಲ್ಯೂ-**1**
ಸಿ.ಡಬ್ಲ್ಯೂ-**1**

ಹೆಸರು : ಎಂ.ಎಂ.ಮುಲ್ಲಾ

ವಯಸ್ಸು : **53** ವರ್ಷ

ಉದ್ಯೋಗ : ಮುಖ್ಯ ಪೇದೆ, ನಂದಗಡ ಪೋಲೀಸ್ ಠಾಣೆ

ವಾಸ : ನಂದಗಡ

ದಿನಾಂಕ 22-08-2023 ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸಸಅ ರವರಿಂದ

2015 ರಿಂದ 2021 ರ ವರೆಗೆ ನಾನು ಖಾನಾಪೂರ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 03.05.2019 ರಂದು ನಾನು ಹಾಗೂ ಚಾ.ಸಾ.4 ರವರ ಜೊತೆ ಜಾಂಬೋಟಿ ಹೊರಠಾಣೆಯಲ್ಲಿ ಗಸ್ತು ಕಾರ್ಯ ನಿರ್ವಹಿಸುತ್ತಿದ್ದಾಗ ಪೋನ್ ಕರೆ ಬಂದಿದ್ದು ಹಬ್ಬಾನಟ್ಟಿ ಕ್ರಾಸ್ ಬಳಿ ಅಪಘಾತವಾಗಿರುತ್ತದೆಯೆಂದು ಮಾಹಿತಿ ಬಂದಿದ್ದು ಕೂಡಲೇ ಪೆಟ್ರೋಲಿಂಗ್ ವಾಹನವನ್ನು ತೆಗೆದುಕೊಂಡು ಚಾ.ಸಾ.4 ರವರ ಜೊತೆ ಹಬ್ಬಾನಟ್ಟಿ ಕ್ರಾಸ್ ಬಳಿ ಹೋಗಿದ್ದು ಸದರಿ ಸ್ಥಳದಲ್ಲಿ 407 ವಾಹನ ಕೆ.ಎ.23/4386 ವಾಹನ ಮರಕ್ಕೆ ಡಿಕ್ಕಿಹೊಡೆದು ಅಪಘಾತವಾಗಿರುವುದು ಕಂಡುಬಂದಿದ್ದು ಸದರಿ ವಾಹನದ ಚಾಲಕನಿಗೆ ಸಣ್ಣಪುಟ್ಟ ಗಾಯಗಳಾಗಿದ್ದು ಸದರಿ ವಾಹನದ ಹೆಸರನ್ನು ಕೇಳಲಾಗಿ ಅಶೋಕ ಸುರೇಶ ಪಾಟೀಲ, ಬಹುದ್ದೂರವಾಡಿ ನಿವಾಸಿ ಎಂದು ತಿಳಿಸಿರುತ್ತಾನೆ. ನಂತರ ಸದರಿ ವಾಹನವನ್ನು ನಾವು ಪರಿಶೀಲಿಸಿದಾಗ ಸದರಿ ವಾಹನದಲ್ಲಿ ರಾಯಲ್ ಸ್ಟಾಗ್ ಕಂಪನಿಯ 750 ಮಿಲಿಯ 48 ಬಾಟಲಿಗಳಿದ್ದ 4 ಬಾಕ್ಸ್ ಗಳು, 750 ಮಿಲಿಯ ಐಬಿ ವಿಸ್ಕಿಯ 48 ಬಾಟಲಿಗಳ 4 ಬಾಕ್ಸಗಳು, 750 ಮಿಲಿಯ ಎಂ.ಸಿ.ರಮನ 19 ಬಾಟಲಿಗಳಿದ್ದ 2 ಬಾಕ್ಸಗಳು, 500 ಮಿಲಿಯ ಕಿಂಗಫಿಶರ 120 ಟಿನ್ ಗಳ 5 ಬಾಕ್ಸಗಳು ಹಾಗೂ 35 ಲೀಟರನಷ್ಟು ಕಂಟ್ರಿ ಸಾರಾಯಿಯಿದ್ದ ನಾಲ್ಕು ಪ್ಲಾಸ್ಟಿಕ್ ಕ್ಯಾನಗಳು ಕಂಡುಬಂದಿರುತ್ತವೆ. ನಂತರ ಸದರಿ ವಾಹನದ ಚಾಲಕನನ್ನು ಈ ಬಗ್ಗೆ ವಿಚಾರಿಸಲಾಗಿ ಆತ ಯಾವುದೇ ಉತ್ತರ ನೀಡದೆ ಸ್ಥಳದಿಂದ

ಓಡಿಹೋಗಿರುತ್ತಾನೆ. ನಂತರ ಚಾ.ಸಾ.4 ರವರನ್ನು ಅಲ್ಲಿಯೇ ನಿಲ್ಲಿಸಿ ನಾನು ಖಾನಾಪೂರ ಠಾಣೆಗೆ ಬಂದು ಸರ್ಕಾರದ ಪರವಾಗಿ ಸ್ವ ಫಿರ್ಯಾದವನ್ನು ತಯಾರಿಸಿ ಠಾಣಾಧಿಕಾರಿಗೆ ನೀಡಿರುತ್ತೇನೆ.

ಸಾಕ್ಷಿದಾರರು ತಾವು ನೀಡಿದ ಸ್ವ ಫಿರ್ಯಾದವನ್ನು ನೋಡಿ ಅದರಲ್ಲಿರುವತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಫಿರ್ಯಾದವನ್ನು ನಿ.ಪಿ.1 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.1-ಎ ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಸ್.ಎಂ.ಹೆಚ್. ವಕೀಲರಿಂದ</u>

ಆ ದಿನ ಬೆಳಿಗ್ಗೆ 8 ಗಂಟೆಯಿಂದ ನಮ್ಮ ಗಸ್ತು ಕಾರ್ಯ ಶುರುವಾಗಿತ್ತು. ಆ ದಿನ ಯಾರೋ ಸಾರ್ವಜನಿಕರು ನನಗೆ ಅಪಘಾತವಾಗಿರುವುದು ಪೋನ್ ಮಾಡಿ ತಿಳಿಸಿರುತ್ತಾರೆ. ನಾವು ಜಾಂಬೋಟಿಯಲ್ಲಿ ಗಸ್ತು ಕಾರ್ಯ ನಿರ್ವಹಿಸುತ್ತಿದ್ದ ಸ್ಥಳದಿಂದ ಅಪಘಾತವಾದ ಸ್ಥಳಕ್ಕೆ ಸುಮಾರು 1½ ಕಿ.ಮೀ ಅಂತರವಿತ್ತು. ಸದರಿ 1 ½ ಕಿ.ಮೀ ಅಂತರದಲ್ಲಿ ಸಾಕಷ್ಟು ಮನಗಳಿರುತ್ತವೆ ಎಂದರೆ ಸರಿಯಲ್ಲ. ಕಣಕುಂಬಿ ಗ್ರಾಮ ದಾಟಿದ ನಂತರವೇ ಹಬ್ಬಾನಟ್ಟಿ ಗ್ರಾಮ ಸಿಗುತ್ತದೆಯೆಂದರೆ ಸರಿ. ಕಣಕುಂಬಿ ಬಳಿ ಅಬಕಾರಿ ತನಿಖಾ ಠಾಣೆಯಿದ್ದು ಬೆಳಗಾವಿ ಕಡೆಗೆ ಬರುವ ಎಲ್ಲಾ ವಾಹನವನ್ನು ಪರಿಶೀಲಿಸಿಯೇ ಬಿಡುತ್ತಾರೆಂದರೆ ಸರಿ. ಒಂದು ವೇಳೆ ಅಕ್ರಮವಾಗಿ ಮದ್ಯವನ್ನು ಸಾಗಾಟ ಮಾಡುತ್ತಿದ್ದರೆ ಸದರಿ ಅಬಕಾರಿ ಠಾಣೆಯವರೇ ಸೂಕ್ತ ಕ್ರಮ ಜರುಗಿಸುತ್ತಾರೆಂದರೆ ಸರಿ. ಒಂದು ವೇಳೆ ತನಿಖಾ ಠಾಣೆಯಿಂದ ಪರಾರಿಯಾಗಿ ಮುಂದೆ ಬಂದರೆ ಸದರಿಯವರು ಜಾಂಬೋಟಿ ಹೊರಠಾಣೆಗೆ ವಿಷಯ ತಿಳಿಸುತ್ತಾರೆಂದರೆ ಇರಬಹುದು. ಆ ದಿನ ಸ್ಥಳಕ್ಕೆ ನಾನು ಹಾಗೂ ಚಾ.ಸಾ.4 ರವರು ಇಬ್ಬರೇ ಹೋಗಿರುತ್ತಾರೆ. ಆರೋಪಿಯು ನಾವು ಹೋದಾಗ ಸ್ಥಳದಲ್ಲಿಯೇ ಕುಳಿತಿದ್ದ. ನಾವು ಸುಮಾರು 200 ಮೀಟರ ಅಂತರದಲ್ಲಿ ವಾಹನ ನಿಲ್ಲಿಸಿ ಅಪಘಾತ ಸ್ಥಳಕ್ಕೆ ಹೋಗಿರುತ್ತೇವೆ. ನಾವು ಸ್ಥಳಕ್ಕೆ ಹೋಗುವುದು ನೋಡಿ ಆರೋಪಿಯು ಓಡಿ ಹೋಗಲು ಪ್ರಯತ್ನಿಸಿರುವುದಿಲ್ಲ. ನಾವು ಸ್ಥಳದಲ್ಲಿ ಆರೋಪಿಯನ್ನು 15 ನಿಮೀಷಗಳವರೆಗೆ ವಾಹನದ ದಾಖಲೆಯ ಬಗ್ಗೆ ವಿಚಾರಣೆ ಮಾಡಿರುತ್ತೇವೆ. ಆರೋಪಿಗೆ ದೇಹದ ಎಲ್ಲಾ ಭಾಗಗಳಿಗೂ ಆ ದಿನ ಪೆಟ್ಟಾಗಿತ್ತು. ಆರೋಪಿಗೆ ಚಿಕಿತ್ಸ ನೀಡಿಸಲು ಪ್ರಯತ್ನಿಸಿರುವುದಿಲ್ಲ. ಆರೋಪಿಗೆ ವಾಹನದ ದಾಖಲೆ ಬಗ್ಗೆ ಕೇಳಿದಾಗ ಓಡಿ ಹೋಗಿರುತ್ತಾನೆ. ನಾವು ಹಿಡಿಯಲು ಪ್ರಯತ್ನಿಸಿದ್ದರೂ ಆರೋಪಿಯು ಸಿಗದೇ ಓಡಿ ಹೋಗಿರುತ್ತಾನೆ.

ಆ ದಿನ ಅಪಘಾತ ಜಾಗದಲ್ಲಿ ಸುಮಾರು ಸಾರ್ವಜನಿಕರು ಇದ್ದರು, ಎಷ್ಟು ಜನ ಇದ್ದರೆಂದು ಈಗ ನೆನಪಿಲ್ಲ. ಆ ದಿನ ನಾವು ಅಪಘಾತವಾದ ವಾಹನವನ್ನು ಪರಿಶೀಲಿಸಿದಾಗ ಮದ್ಯದ

ಬಾಟಲಿಗಳನ್ನು ಅಕ್ರಮವಾಗಿ ಸಾಗಾಟ ಮಾಡುತ್ತಿರುವುದು ಕಂಡುಬಂದಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಾನು ಪ್ರಸ್ತುತ ಪ್ರಕರಣದಲ್ಲಿ ದೂರನ್ನು ಮಾತ್ರ ನೀಡಿರುತ್ತೇನೆ. ಉಳಿದ ವಿಚಾರಗಳು ಗೊತ್ತಿಲ್ಲ. ಮಹಜರನ್ನು ಯಾರು ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ನಾನು ತನಿಖಾಧಿಕಾರಿಗೆ ಯಾವುದೇ ಹೇಳಿಕೆ, ಮರುಹೇಳಿಕೆಯನ್ನು ನೀಡಿರುವುದಿಲ್ಲ. ಪ್ರಸ್ತುತ ಪ್ರಕರಣಕ್ಕೂ ಆರೋಪಿಗೂ ಯಾವುದೇ ರೀತಿಯ ಸಂಬಂಧವಿಲ್ಲದಿದ್ದರೂ ನಾನು ಇಲಾಖಾ ಅಂಕಿ ಅಂಶಕ್ಕೋಸ್ಕರ ಸುಳ್ಳು ದೂರು ನೀಡಿರುತ್ತೇನೆಂದರೆ ಸರಿಯಲ್ಲ. ಆ ರಿತ್ಯಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.